ದಿನಾಂಕ 01-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ** ಕೆ.ಪಿ.ಕೆ.ಎಸ್ **ವಕೀಲರವರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಸಾಕ್ಷಿಗೆ ನಿಪಿ 9 ದಾಖಲೆಯನ್ನು ತೋರಿಸಲಾಗಿರುತ್ತದೆ. ಸ್ಥದ್ರಿ ದಾಖಲೆಯಲ್ಲಿ ಸಾಕ್ಷಿದಾರರು ಸಹಿಯನ್ನು ನೋಡಿ ಸಹಿ ತನ್ನದೇ ಎಂದು ಗುರುತಿಸಿರುವ ಕಾರಣ ಸ್ಥದ್ರಿ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಮತ್ತು ಒಳ ರೋಗಿ ಮತ್ತು ಹೊರ ರೋಗಿಯ ಸಂಪೂರ್ಣ ಕಡತವನ್ನು ಸಾಕ್ಷಿದಾರರು ಗುರುತಿಸಿರುವುದರಿಂದ ಅದನ್ನು ನಿಪಿ 14 ಎಂದು ಗುರುತಿಸಲಾಯಿತು. ಎರಡು ಎಕ್ಸ್ರೇ ಕಿರಣಗಳನ್ನು ಸಾಕ್ಷಿದಾರರು ಗುರುತಿಸಿರುವುದರಿಂದ ನಿಪಿ 15 ಎಂದು ಗುರುತಿಸಲಾಯಿತು. ಮಾನಸಿಕ ವಿಭಾಗದ ಹೊರರೋಗಿ ಕಡತವನ್ನು ಸಾಕ್ಷಿದಾರರು ಗುರುತಿಸಿರುವುದರಿಂದ ನಿಪಿ 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರ ಪರ ಶ್ರೀ ಡಿ.ಬಿ.ಎಸ್., ವಕೀಲರಿಂದಃ**

ನಾನು ಮಾನಸಿಕ ತೊಂದರೆಗೆ ಚಿಕಿತ್ಸೆಯನ್ನು ನೀಡಿರುತ್ತೇನೆ ಎಂದರೆ ಸರಿ. ನರ ರೋಗಕ್ಕೆ ಚಿಕಿತ್ಸೆಯನ್ನು ನೀಡಿದವರು ಬೇರೆ ವೈದ್ಯರು ಎಂದರೆ ಸರಿ. ದಿಃ 18-04-2024 ರಂದು ಚಿಕಿತ್ಸೆಯ ಕೊಡುವ ಸಲುವಾಗಿ ನಮ್ಮ ಬಳಿ ರೆಫರ್ ಮಾಡಿರುತ್ತಾರೆ. ನರ ರೋಗಕ್ಕೆ ಸಂಬಂದಪಟ್ಟಂತೆ ಚಿಕಿತ್ಸೆ ಜಾರಿಯಲ್ಲಿ ಇತ್ತು. ದಿಃ 18-04-2024 ಕ್ಕೆ ಹಿಂದೆ ಯಾವ ಚಿಕಿತ್ಸೆ ನೀಡಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಸಾಕ್ಷಿ ಮುಂದುವರಿದು ಕಡತ ನೋಡಿ ಹೇಳಬಹುದು ಎಂದು ನುಡಿಯುತ್ತಾರೆ.

ನಾನು ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಗಾಯಳುವಿನ ಗಾಯದ ಪ್ರಮಾಣ ಪತ್ರ ನೋಡುವ ಸಂದರ್ಭ ಬಂದಿತ್ತು. ನಾನು ಮುಖ್ಯ ವಿಚಾರಣೆಯಲ್ಲಿರುವ ಎಲ್ಲಾ ವಿಚಾರಗಳನ್ನು ಅರ್ಥ ಮಾಡಿಕೊಂಡು ಸಹಿ ಮಾಡಿರುತ್ತೇನೆ. ನನ್ನ ಕಡತದಲ್ಲಿ ಅರ್ಜಿದಾರರು ದೋಣಿಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದರು ಎಂದು ಕಂಡು ಬರುತ್ತದೆ. ಕಡತವನ್ನು ನೋಡಿ ಹೇಳಬಹುದು ವಿನಾಃ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಮಾನಸಿಕ ರೋಗ ಸಾಮಾನ್ಯವಾಗಿ ಎಲ್ಲಾ ರೀತಿಯಲ್ಲಿ ಬರಲು ಸಾಧ್ಯವಿದೆ ಎಂದರೆ ಸರಿ. ಅರ್ಜಿದಾರರು ಅಪಘಾತ ಪೂರ್ವದಲ್ಲಿ ಯಾವ ಮಾನಸಿಕ ಸ್ಥಿತಿಯಲ್ಲಿ ಇದ್ದರು ಎಂಬ ಮಾಹಿತಿ ನನಗೆ ಇಲ್ಲ ಎಂದರೆ ಸಾಕ್ಷಿದಾರರು ನಾನು ಅರ್ಜಿದಾರರಿಗೆ ವಿಚಾರಣೆ ಮಾಡುವ ಸಮಯದಲ್ಲಿ ಎಲ್ಲಾ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಅಪಘಾತ ಪೂರ್ವದಲ್ಲಿ ಅರ್ಜಿದಾರರು ಮದ್ಯಪಾನ ಮಾಡುತ್ತಿದ್ದರು ಮತ್ತು ಅದಕ್ಕೆ ಸಂಬಂದಪಟ್ಟ ಚಿಕಿತ್ಸೆ ಜಾರಿಯಲ್ಲಿ ಇತ್ತು.

ಸಾಮಾನ್ಯವಾಗಿ ಮದ್ಯಪಾನ ಮಾಡುವವರಿಗೆ ಮಾನಸಿಕ ಖಾಯಿಲೆ ಸ್ವಲ್ಪ ಬೇಗ ಬರುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಇರುವ ಮಾನಸಿಕ ತೊಂದರೆಗಳು ಮದ್ಯಪಾನದಿಂದ ಬರುವ ಸಾದ್ಯತೆ ತುಂಬಾ ಕಡಿಮೆ ಆದರೆ ಈ ಕೇಸಿನಲ್ಲಿ ಅಪಘಾತದಿಂದ ಮಾನಸಿಕ ಅಸ್ವಸ್ತವಾಗಿದೆ ಎಂದು ನನ್ನ ವಿಚಾರಣೆಯಲ್ಲಿ ಕಂಡು ಬರುತ್ತದೆ. ಅರ್ಜಿದಾರರು ನಾನು ಕೇಳುವ ಪ್ರಶ್ನೆಗಳಿಗೆ ಸರಿಯಾದ ರೀತಿಯಲ್ಲಿ ಉತ್ತರವನ್ನು ನೀಡಿದ್ದಾರೆ ಎಂದರೆ ಕೆಲವು ಪ್ರಶ್ನೆಗಳಿಗೆ ಸರಿಯಾದ ರೀತಿಯಲ್ಲಿ ಸಾಮಾನ್ಯ ರೀತಿಯಾದ ಉತ್ತರವನ್ನು ಕೊಡಲಿಲ್ಲ.

ಅರ್ಜಿದಾರರಿಗೆ ಯಾವುದೇ ರೀತಿಯ ಮಾನಸಿಕ ತೊಂದರೆ ಇರಲಿಲ್ಲ, ಆದರೆ ಕೆಲವು ಪ್ರಶ್ನೆಗಳಿಗೆ ಸಮಂಜಸವಾದ ರೀತಿಯಲ್ಲಿ ಉತ್ತರ ನೀಡಲಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಮಾನಸಿಕ ರೀತಿಯಲ್ಲಿ ಯಾವುದೇ ರೀತಿಯ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ.

ಅರ್ಜಿದಾರ ರಿಗೆ ಸಹಾಯ ಮಾಡಲು ಸುಳ್ಳು ಮಾನಸಿಕ ಅಂಗನ್ಯೂನತೆ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಮಾನಸಿಕ ಖಾಯಿಲೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.